## ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ
## ಸಿ.ಸಿ. 726/2023

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 3**

**ದಿನಾಂಕಃ** 04.06.2026 **ಸಿಡಬ್ಲ್ಯೂ 4**

| | |
|---|---|
| ಹೆಸರು | ಮಹೇಶ ಬಿ. |
| ತಂದೆ ಹೆಸರು | ದಾಸಪ್ಪ |
| ವಯಸ್ಸು | 39 ವರ್ಷ |
| ಉದ್ಯೋಗ | ಅಬಕಾರಿ ಪೇದೆ |
| ವಾಸ ಸ್ಥಳ | ಹರಿಹರ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಸನ್ ಫೆಬ್ರುವರಿ 2023 ರಿಂದ ಜುಲೈ 2025 ರವರೆಗೆ ಅಬಕಾರಿ ಉಪ ಅಧೀಕ್ಷಕರ ಕಚೇರಿ ದಾವಣಗೆರೆ ಉಪ ವಿಭಾಗದಲ್ಲಿ ಅಬಕಾರ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 21.03.2023 ರಂದು ನಾನು , ಚಾಸಾ.1 ರವರು ಮತ್ತು ಚಾಸಾ.5 ರವರೊಂದಿಗೆ ಬೆಳ್ಳುಡಿ ಸರ್ಕಲ್ ನಲ್ಲಿರುವ ಪಂಚರ ಬಳಿ ಹರಿಹರ ಶಿವಮೊಗ್ಗ ರಸ್ತೆಯಲ್ಲಿ ರಸ್ತೆಗಾವಲು ನಡೆಸಬೇಕಾಗಿದ್ದು ಈ ವೇಳೆ ಯಾವುದಾದರೂ ಅಬಕಾರಿ ಅಕ್ರಮಗಳು ಕಂಡು ಬಂದಲ್ಲಿ ಪಂಚರಾಗಿ ಸಹಕರಿಸಬೇಕಾಗಿ ಅಬಕಾರಿ ನಿರೀಕ್ಷಕರು ಕೇಳಿಕೊಂಡಿದ್ದು ಪಂಚರು ಒಪ್ಪಿದ ನಂತರ ಸದರಿಯವರಿಗೆ ಪಂಚರ ನೋಟೀಸು ಜಾರಿ ಮಾಡಿ, ಅಲ್ಲಿಯೇ ಇದ್ದ ಹರಿಹರ ಶಿವಮೊಗ್ಗ ರಸ್ತೆಯಲ್ಲಿ ರಸ್ತೆಗಾವಲು ನಡೆಸುತ್ತಿರುವಾಗ ಬನ್ನಿಕೋಡು ಗ್ರಾಮದ ಕಡೆಯಿಂದ ಒಬ್ಬ ಆಸಾಮಿ ತನ್ನ ದ್ವಿಚಕ್ರವಾಹನದಲ್ಲಿ ಟ್ಯಾಂಕರ್ ಮೇಲೆ ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ ಬರುವುದನ್ನು ಕಂಡು ಅಲ್ಲಿಯೇ ತಡೆದು ನಿಲ್ಲಿಸಲಾಗಿ ಮತ್ತು ಚೀಲದಲ್ಲಿ ಏನು ಇದೆ ಎಂದು ಕೇಳಲಾಗಿ ಸದರಿ ವ್ಯಕ್ತಿಯು ಗಾಬರಿಗೊಂಡಿರುವುದನ್ನು ಕಂಡು ಚಾಸಾ.1 ರವರು ಸ್ಥಳದಲ್ಲಿಯೇ ಶೋಧನಾ ಸಮುಚಿತ ಆಧಾರವನ್ನು ತಯಾರು ಮಾಡಲು ಸಾಕಷ್ಟು ಕಾಲಾವಕಾಶ ಇಲ್ಲದೇ ಇರುವುದರಿಂದ ಸ್ಥಳದಲ್ಲಿಯೇ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿಕೊಂಡು ಪರಸ್ಪರ ಪಂಚರು ಮತ್ತು ನಾವು ಅಂಗಶೋಧನೆ ಮಾಡಿಕೊಂಡು, ಸದರಿ ಪ್ಲಾಸ್ಟಿಕ್ ಚೀಲವನ್ನು ತೆಗೆದು ನೋಡಲಾಗಿ ಸದರಿ ಪ್ಲಾಸ್ಟಿಕ್ ಚೀಲದಲ್ಲಿ ಮದ್ಯದ ಟೆಟ್ರಾ ಪ್ಯಾಕೆಟಗಳು ಇರವುದು ಕಂಡು ಬಂದಿರುತ್ತದೆ. ನಂತರ ಅವುಗಳನ್ನು ಪಂಚರ ಸಮಕ್ಷಮ ಎಣಿಕೆ ಮಾಡಿ ನೋಡಲಾಗಿ 90 ಎಂಎಲ್ ನ 140 ಹೈವಾಟ್ಸ್ ವಿಸ್ಕಿಯ ಟೆಟ್ರಾ ಪ್ಯಾಕೆಟಗಳು ಇರುವುದು ಕಂಡು ಬಂದಿರುತ್ತದೆ. ಇಷ್ಟೊಂದು ಮದ್ಯವನ್ನು ಒಯ್ಯುವುದಕ್ಕೆ

ಪರವಾನಗಿ ಅಥವಾ ದಾಖಲಾತಿ ಇವೇಯೇ ಕೇಳಲಾಗಿ ಸದರಿ ವ್ಯಕ್ತಿಯು ಯಾವುದೇ ಪರವಾನಗಿ ಮತ್ತು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಸದರಿ ಮದ್ಯದ ಟೆಟ್ರಾ ಪ್ಯಾಕೆಟಗಳಿಂದ 90 ಮಿಲಿಯ 30 ಹೈವಾಟ್ಸ್ ವಿಸ್ಕಿಯ ಪ್ಯಾಕೆಟ್ಟಳನ್ನು ರಾಸಾಯನಿಕ ವಿಶ್ಲೇಶಣೆಗಾಗಿ ಮಾದರಿ ತೆಗೆದು ಮಾದರಿ ಚೀಟಿ ಅಂಟಿಸಿ ಇಲಾಖಾ ಮೊಹರಿನಿಂದ ಸೀಲ್ ಮಾಡಿರುತ್ತೇನೆ ಮತ್ತು ದ್ವಿಚಕ್ರ ವಾಹನ ನೊಂದಣಿ ಸಂಃಕೆಎ–17 ಡಬ್ಲ್ಯೂ 4239 ಮತ್ತು ಉಳಿದ ಮದ್ಯದ ಟೆಟ್ರಾ ಪ್ಯಾಕೆಟಗಳನ್ನು ಇಲಾಖಾ ವಶಕ್ಕೆ ಪಡೆದುಕೊಂಡು ಸದರಿ ವ್ಯಕ್ತಿಗೆ ನೋಟೀಸು ನೀಡಿ ಮು.ಮಾ.ಗಳೊಂದಿಗೆ ಕಚೇರಿಗೆ ಬಂದು ಚಾಸಾ.1ರವರು ದೂರನ್ನು ನೀಡಿರುತ್ತಾರೆ. ನಾನು ತನಿಖಾಧಿಕಾರಿಯ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ಮು.ಮಾ.1 ಮತ್ತು 2ನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಪರ ವಕೀಲರು ಆರೋಪಿ ಗುರುತಿಸುವ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ಎಸ್ ವಕೀಲರಿಂದಃ**

ನಾನು ಆ ದಿನ ಕರ್ತವ್ಯದಲ್ಲಿದ್ದೆ ಎಂದು ತೋರಿಸಲು ತನಿಖಾಧಿಕಾರಿಗೆ ಯಾವುದೇ ದಾಖಲೆ ನೀಡಿರುವುದಿಲ್ಲ. ಆ ದಿನ ಗಸ್ತು ಕರ್ತವ್ಯಕ್ಕೆ ನೇಮಕ ಮಾಡಿದ ಬಗ್ಗೆ ತನಿಖಾಧಿಕಾರಿಗೆ ಯಾವುದೇ ದಾಖಲೆಯನ್ನು ನಾನು ಕೊಟ್ಟಿರುವುದಿಲ್ಲ. ಪಂಚರನ್ನು ಚಾಸಾ.1ರವರು ಬೆಳ್ಳುಡಿ ಕ್ರಾಸ್ ಹತ್ತಿರ ಕರೆದುಕೊಂಡಿರುತ್ತಾರೆ. ಪಂಚರು ಗುನ್ನಾ ಸ್ಥಳದ ಸ್ಥಳೀಯ ವಾಸಿಗಳು ಅಲ್ಲ ಎಂದರೆ ಸರಿ. ಪಂಚರಿಗೆ ನೋಟೀಸ್ ನೀಡಿದಾಗ ಸಮಯ ಮಧ್ಯಾಹ್ನ 11.15 ಆಗಿತ್ತು ಗುನ್ನಾ ಸ್ಥಳದಲ್ಲಿ ಸ್ಥಳೀಯರು ಎಷ್ಟು ಜನ ಇದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಆ ದಿನ ನಾನು ಸುಮಾರು 4 ರಿಂದ 5 ವಾಹನಗಳನ್ನು ಶೋಧನೆ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಎಷ್ಟು ವಾಹನಗಳನ್ನು ಶೋಧನೆ ಮಾಡಿರುತ್ತೇವೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ಯಾವ ವಾಹನದಲ್ಲಿ ಶೋದನೆ ಮಾಡಿರುತ್ತೇವೆ ಎಂದು ನನಗೆ ಅವುಗಳ ಸಂಖ್ಯೆ ಹೇಳಲು ಬರುವುದಿಲ್ಲ. ಶಿವಮೊಗ್ಗ ಹರಿಹರ ರಸ್ತೆಯಲ್ಲಿ ಸಾಕಷ್ಟು ವಾಹನ ಓಡಾಡುತ್ತವೆ ಎಂದರೆ ಸರಿ. ಎಲ್ಲಾ ಸ್ಥಳದ ಸುತ್ತ ಮುತ್ತಲು ಸಾಕಷ್ಟು ಅಂಗಡಿಗಳು ಇವೆ ಎಂದರೆ ಸರಿ. ಮಹಜರ್ ಮಾಡಿದ ಮೇಲೆ ನಾವು ಫೋಟೋಗಳನ್ನು ತೆಗೆದಿರುವುದಿಲ್ಲ. ಎಲ್ಲಾ ಟೆಟ್ರಾ ಪ್ಯಾಕೆಟ್ ಗಳಿಂದ ರಾಸಾಯನಿಕ ಪರೀಕ್ಷಗಾಗಿ ತೆಗೆದಿರುವುದಿಲ್ಲ, ಕೇವಲ 30 ಟೆಟ್ರಾ ಪ್ಯಾಕೆಟ್ ಗಳಿಂದ ಮಾತ್ರ ರಾಸಾಯನಿಕ ಪರೀಕ್ಷಗಾಗಿ ಮದ್ಯ ತೆಗೆದುಕೊಂಡಿರುತ್ತೇವೆ. ಪ್ರತಿಯೊಂದು ಟೆಟ್ರಾ ಪ್ಯಾಕೆಟ್ ಮೇಲೆ ಭದ್ರತಾ ಸಂಖ್ಯೆ ಇರುತ್ತವೆ ಎಂದರೆ ಸರಿ. ಭದ್ರತಾ ಸಂಖ್ಯೆಗಳನ್ನು ಪಂಚನಾಮೆಯಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ಪಂಚನಾಮೆಯನ್ನು ನಮ್ಮ ಸಹೋದ್ಯೋಗಿ ಚಾಸಾ.5 ತಯಾರಿಸಿರುತ್ತಾರೆ. ಮುದ್ದೆ ಮಾಲುಗಳು ರಸ್ತೆಯ ಪಕ್ಕದಲ್ಲಿ ಹಾಗೂ ಎಲ್ಲಾ ಮದ್ಯದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಆ ದಿನ ಯಾವುದೇ ಪಂಚನಾಮೆ ಮಾಡಿ ಮುದ್ದೆ ಮಾಲುಗಳನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳಿಗೂ ಹಾಗೂ ಆರೋಪಿತರಿಗೂ ಯಾವುದೇ

ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರಿಗೆ ಅನುಕೂಲವಾಗಲಿ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯ ಮುಂದೆ ಸುಳ್ಳು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ